LEGISLATIVE ASSEMBLY

SIXTEENTH DAY.

Monday, 2nd April 1951.

The Assembly met in the Assembly Hall, Old Public Offices, Bangalore, at One of the Clock.

MR. SPEAKER (The Hon'ble Sri V. Venkatappa) in the Chair.

STARRED QUESTIONS.

(to which oral answers were given)

Starting a Combined Dispensary at Harihar.

*ಪ್ರಶ್ನೆ 210.—ಶ್ರೀ ಪಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಹರಿಹರದಲ್ಲಿ ಒಂದು ಹೆರಿಗೆ ಆಸ್ಪತ್ರೆಯನ್ನು ಏರ್ಪಡಿಸುವ ಉದ್ದೇಶವೇನಾದರೂ ಇದೆಯೆ;

(b) ಈ ಉದ್ದೇಶಕ್ಕಾಗಿ ಹರಿಹರದ ನಿವಾಸಿಗಳು ಅನೇಕ ದಾತ್ಯಗಳಿಂದ ಹಣವನ್ನು ಪಡೆದು ಸಂಗ್ರಹಿಸಿ ಆ ಮೊಬಲಗನ್ನು ಸರ್ಕಾರದ ಖಜಾನೆಯಲ್ಲಿ ಠೇವಣಿ ಇಟ್ಟಿರುವುದೂ ನಿಜವಲ್ಲವೆ?

ಉತ್ತರ.—ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು (ಲಾ ಮತ್ತು ಲೇಬರ್ ಸಚಿವರು). [On behalf of ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಪ್ರಧಾನ ಸಚಿವರು)].—

(a) ಹರಿಹರದಲ್ಲಿ ಒಂದು "ಕಂಬೈನ್ಡ್ ಡಿಸ್ಪೆನ್ಸರಿ" ಯನ್ನು ಏರ್ಪಡಿಸುವ ಸಲಹೆಯನ್ನು ಪರಿಶೀಲಿಸಲಾಗುತ್ತಿದೆ.

(b) ಹೌದು, ಹರಿಹರದಲ್ಲಿ ಒಂದು "ಕಂಬೈನ್ಡ್ ಡಿಸ್ಪೆನ್ಸರಿ" ಯನ್ನು ಕಟ್ಟುವುದಕ್ಕಾಗಿ ಸಾರ್ವಜನಿಕರು ಕೊಟ್ಟಿರತಕ್ಕ 10,000 ರೂಪಾಯಿಗಳ ಮೊಬಲಗು ಠೇವಣಿಯಾಗಿದೆ.

ಶ್ರೀ ಪಿ. ವೀರಪ್ಪನವರು.—ಹರಿಹರದಲ್ಲಿ ಕಂಬೈನ್ಡ್ ಡಿಸ್ಪೆನ್ಸರಿಯನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೀರಾ?

The Hon'ble Sri K. T. BHASHYAM.—We have resolved to construct a combined dispensary there.

ಶ್ರೀ ಪಿ. ವೀರಪ್ಪನವರು.—ಹತ್ತುಸಾವಿರ ರೂಪಾಯಿ ಠೇವಣಿಯಾಗಿದೆಯೆಂದು ಹೇಳಲಾಗಿದೆ. ಠೇವಣಿಯಾಗಿ ಎಷ್ಟು ವರ್ಷಗಳಾಯಿತು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾಲ್ಕೈದು ವರ್ಷವಾಯಿತು.

ಶ್ರೀ ಪಿ. ವೀರಪ್ಪನವರು.—ಐದು ವರ್ಷಗಳಿಂದೀಚೆಗೆ ಈ ಬಗ್ಗೆ ತೆಗೆದುಕೊಂಡಿರುವ ಕಾರ್ಯಕ್ರಮವೇನು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮೊದಲು ಅದಕ್ಕೆ 16 ಸಾವಿರ ರೂಪಾಯಿಗೆ ಅಂದಾಜು ತಯಾರಾಯಿತು, ಆಮೇಲೆ ಪದಾರ್ಥಗಳ ಬೆಲೆ ಹೆಚ್ಚಿದುದರಿಂದ ರಿವೈಸ್ಡ್ ಅಂದಾಜು ಕೇಳಿದೆವು. The revised estimate went up to 38,000 rupees. Therefore, we have now asked the Municipality whether they will bear a share.

ಶ್ರೀ ಪಿ. ವೀರಪ್ಪನವರು.—ಮೊದಲು 16,000 ಇದ್ದುದು 38,000 ಆದದ್ದು ತಡಮಾಡಿದ್ದರಿಂದಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದರಿಂದ ಅಲ್ಲ, ಕೆಲವು ಬದಲಾವಣೆಗಳನ್ನು ಮಾಡಬೇಕಾಯಿತು ಕಟ್ಟಿದದಲ್ಲಿ, ತಕ್ಕ ಸ್ಥಳಾವಕಾಶ ಹೆಚ್ಚಿನಬೇಕಾಯಿತು, ಅದರಿಂದ ಹಣ ಹೆಚ್ಚಾಯಿತು.

ಶ್ರೀ ಪಿ. ವೀರಪ್ಪನವರು.—ಮುನಿಸಿಪಾಲಿಟಿಯವರು ಎಷ್ಟು ಕೊಡುತ್ತೇವೆಂದು ಹೇಳಿದ್ದಾರೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಮೊದಲು 16 ಸಾವಿರ ಅಂದಾಜಿದ್ದಾಗ ಆರುಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದ್ದರು. ಈಗ 38 ಸಾವಿರ ಆದಮೇಲೆ ಎಷ್ಟು ಕೊಡುತ್ತೀರೆಂದು ಕೇಳಿದ್ದೇವೆ.

ಶ್ರೀ ಪಿ. ವೀರಪ್ಪನವರು.—ಕಟ್ಟಡದ ಕೆಲಸವನ್ನು ಎಷ್ಟು ದಿವಸದಲ್ಲಿ ಮಾಡುತ್ತೀರಿ?

The Hon'ble Sri K. T. BHASHYAM.—As soon as we receive information from the Municipality we will begin the work.

ಶ್ರೀ ಪಿ. ವೀರಪ್ಪನವರು.—ಈ ವಿಷಯದಲ್ಲಿ ಇಷ್ಟು ಕೊಡಬೇಕೆಂದು ಮುನಿಸಿಪಾಲಿಟಿಯವರು ನಿರ್ಣಯ ಮಾಡಿ ಕಳುಹಿಸಿದ್ದಾರೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ.

ಶ್ರೀ ಪಿ. ವೀರಪ್ಪನವರು.—ಮುನಿಸಿಪಾಲಿಟಿಯವರು ತಿಳಿಸಿದ ತಕ್ಷಣ ಕೆಲಸ ಮಾಡಿಸುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕ್ಯೆಲಾದ ಮಟ್ಟಿಗೂ ಬೇಗ ಮಾಡುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಮುನಿಸಿಪಾಲಿಟಿಯವರು ಎಷ್ಟು ಹಣ ಕೊಡಬೇಕೆಂದು ಗೊತ್ತುಮಾಡಿದ್ದೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಷ್ಟು ಕೊಡಬೇಕೆಂದು ನಾವು ಹೇಳಿಲ್ಲ; ಈಗ ಅಂದಾಜು 38,000 ರೂಪಾಯಿ ಆಗಿದೆ, ನೀವು ಎಷ್ಟು ಕೊಡುತ್ತೀರಿ ಎಂದು ಕೇಳಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪನವರು.—ನೀವೇನಾದರೂ ಸೂಚನೆ ಕೊಟ್ಟಿದ್ದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ಶೇಷಣಿ ಇಟ್ಟಿರುವ ಹಣಕ್ಕೆ ಬಡ್ಡಿ ಸೇರಿಸುತ್ತಿದ್ದೀರಾ ?

The Hon'ble Sri K. T. BHASHYAM.—I do not know about that. I must find out.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಡೋನೇಷ್ಟ್ ಕೊಟ್ಟ ಮೇಲೆ ಬೇಗ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬಂದರೆ ಒಳ್ಳೆಯದಲ್ಲವೆ ?

ಅಧ್ಯಕ್ಷರು.—ಮಾಡುತ್ತೇವೆಂದು ಉತ್ತರ ಹೇಳಿದ್ದಾರೆ.

ಶ್ರೀ ಎ. ಭೀಮಪ್ಪನಾಯಕರು.—ಹೀಗೆ ಪ್ರತಿಯೊಂದು ವಿಚಾರದಲ್ಲೂ ನಿಧಾನವಾಗುತ್ತಿರುವುದರಿಂದ ಹೀಗಾಗುತ್ತಿದೆಯಲ್ಲವೆ ?

The Hon'ble Sri K. T. BHASHYAM.—That is a general question ; that does not arise.

Amount Spent on Rural Upliftment and Welfare of the Depressed Classes in the State.

*Q.—81. **Sri M. MUNISWAMY** (Kolar District—Depressed Class).—

Will the Government be pleased to state :—

(*a*) the amount of money that has been spent on rural upliftment and welfare of the Depressed class people in the State ;

(*b*) the districts or taluks, if any, which do not get the benefits from the Government for these purposes ?

A.—**The Hon'ble Sri R. CHENNIGA-RAMIAH** (Minister for Local Self-Government).—

(*a*) 1948-49 : Rs. 17,63,359.
1949-50 : Rs. 13,04,963.
During 1950-51—an allotment of Rs. 19 lakhs is made and the entire grant is likely to be spent before the close of the year.

(*b*) Nil.

Sri M. MUNISWAMY.—In what form the scheme regarding the Rural Upliftment and Welfare of the Depressed Class has materialised in Kolar Gold Fields?

The Hon'ble Sri R. CHENNIGA-RAMIAH.—Rural Upliftment question does not come in the case of Kolar Gold Fields area. It is not a rural area, it is an urban area.

Sri M. MUNISWAMY.—Is there a Special Officer to look after the welfare of the Depressed Class people ?

The Hon'ble Sri R. CHENNIGA-RAMIAH.—Yes.

Sri M. MUNISWAMY.—Is there any taluk or district that has been deprived of this privilege ?

The Hon'ble Sri R. CHENNIGA-RAMIAH.—It has been replied 'no'.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ ನಿಮ್ಮ ಪಂಗಡ).—ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವ ಹಣವನ್ನು ಕೋರಾರ ಚಿನ್ನದಗಣಿ ಪ್ರದೇಶದಲ್ಲಿ ಖರ್ಚು ಮಾಡುವುದಿಲ್ಲವೆಂದು ಹೇಳಿದಿರಿ, Is it in connection with the depressed class grant ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಡಿಪ್ರೆಸ್ಡ್ ಕ್ಲಾಸ್ ಗ್ರಾಂಟನ್ನು ಖರ್ಚು ಮಾಡುತ್ತೇವೆ, ರೂರರ್ ಡೆವಲಪ್‌ಮೆಂಟ್‌ಗೆ ಆ ಪ್ರದೇಶ ಸೇರುವುದಿಲ್ಲವೆಂದು ಹೇಳಿದೆ.

ಶ್ರೀ ಎಂ. ಮಾದಯ್ಯನವರು.—1948-49ರಲ್ಲಿ 17 ಲಕ್ಷ ಚಿಲ್ಲರೆ ಕೊಟ್ಟಿದೆ, 1949-50 ರಲ್ಲಿ 13 ಲಕ್ಷ ಚಿಲ್ಲರೆ ಆಗಿದೆ ಏಕೆ ?

ಮಾನ್ಯ ಶ್ರಿ ಆರ್. ಚೆನ್ನಿಗರಾಮಯ್ಯನವರು.—ಇದರಲ್ಲಿ ಸದಸ್ಯರಿಗೆ ಸ್ವಲ್ಪ ಅನುಮಾನ ಬಂದಿರುವ ಹಾಗಿದೆ. ಇದು 9 ತಿಂಗಳ ರೆಕ್ಕ ಮಾತ್ರ, ಪೂರ್ತಿ ವರ್ಷದ್ದಲ್ಲ.

ಶ್ರೀ ಎಂ. ಮಾದಯ್ಯನವರು.—ಎಲ್ಲ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕುಗಳಿಗೂ ಕೊಟ್ಟಿದೆಯೆಂದು ತಿಳಿಸಿದೆ, ಇದನ್ನು ಹಂಚುವುದಕ್ಕೆ ಏನಾದರೂ ಯೋಜನೆ ಇದೆಯೆ ?

ಅಧ್ಯಕ್ಷರು.—ಈ ವಿಷಯವನ್ನು ಬೇಕಾದಷ್ಟು ಸಾರಿ ಕೇಳಿದ್ದೀರಿ. ಅದಕ್ಕೆ ಉತ್ತರ ಕೊಟ್ಟಿದ್ದಾರೆ.

Basis of Enumeration of Scheduled Castes and Backward classes or Communities in 1951 Census.

*Q.—109. **Sri H. SIDDAVEERAPPA** (Chitaldrug District—General).—

Will the Government be pleased to state :—

(*a*) whether the Government of Mysore have been consulted in the matter of the enumeration of Census, 1951, now going on in the State ;

(*b*) whether any Scheduled Castes and Backward Classes or communities are enumerated in the ensuing Census ; if so, the communities in the State which are enumerated as Scheduled Castes and Backward Classes or Backward communities ;

(*c*) the basis on which this communitywar list is given ; and basis on which the communities enumerated thereunder are included ;